# ತಂಡವನ್ನು ಕಟ್ಟಬೇಕು

ಎನ್. ಚೇತನ್ ರಾಜ್
ಉದಯದ 'ಕ್ಷಮಾ'ದ ವಿಕ್ಕಿ

**◆ ನಿಮ್ಮ ಪಾತ್ರದ ಮಹತ್ವವೇನು?**

ಕತೆಯ ನಾಯಕಿ ಕ್ಷಮಾಳ ಮಗನ ಪಾತ್ರವನ್ನು ಮಾಡುತ್ತಿದ್ದೇನೆ. ವಿಕ್ಕಿ ಕ್ರಿಕೆಟ್ ಆಟಗಾರ. ರಾಷ್ಟ್ರೀಯ ತಂಡದಲ್ಲಿ ಆಡುವ ಆಸೆಯಿದೆ. ಅದಕ್ಕಾಗಿ ಅಭ್ಯಾಸ ಮಾಡುತ್ತಿದ್ದಾನೆ. ಅಲ್ಲಿ ಸಾಕಷ್ಟು ಹಣ ಸಂಪಾದಿಸಿ ತಮ್ಮ ಕುಟುಂಬದ ಕಷ್ಟವನ್ನು ಪರಿಹರಿಸಬಹುದು ಎನ್ನುವ ನಿರೀಕ್ಷೆ ಆತನದು. ತಂದೆ ಮನೆಬಿಟ್ಟು ಹೋಗಿದ್ದಾರೆ. ಅದಕ್ಕೆ ಬಲವಾದ ಕಾರಣ ಯಾರಿಗೂ ಗೊತ್ತಿಲ್ಲ. ತಾಯಿ ಬಗ್ಗೆ ತುಂಬಾ ಕಾಳಜಿಯಿದೆ. ಮುಂಗೋಪಿಯಾದರೂ ತಾಯಿಗೆ ಪ್ರತಿ ಹಂತದಲ್ಲಿ ನೆರವು ನೀಡಲು ಮುಂದಾಗುತ್ತಾನೆ. ಇನ್ನೂ ಪಿಯು ಓದುತ್ತಿದ್ದಾನೆ. ದುಡಿಯಲು ಹೋಗಬೇಕು ಎನ್ನುವ ಅವನಿಗೆ ಅಜ್ಜಿ ಕೆಲಸಕ್ಕೆ ಹೋಗಬೇಡ ಅನ್ನುತ್ತಾಳೆ. ಅವಳಿಗೆ ಕ್ರಿಕೆಟಿಗನಾದರೆ ಕಷ್ಟ ಪರಿಹಾರ ಆಗುತ್ತೆ ಎನ್ನುವ ನಿರೀಕ್ಷೆ. ಅವನ ಅಕ್ಕನಿಗೆ ತಂದೆ ಮನೆಬಿಡಲು ಅಮ್ಮನೇ ಕಾರಣ ಎಂದುಕೊಂಡಿದ್ದಾಳೆ. ವಿಕ್ಕಿಯ ಪಾತ್ರ ಹೀಗೆ ಮುಖಾಮುಖಿ ಆಗುತ್ತಿದೆ.




**◆ ನಟ ಆಗಿದ್ದು ಏಕೆ? ಹೇಗೆ?**

ನಟನೆಗೂ ಮುನ್ನ ಮಾರ್ಕೆಟಿಂಗ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆ. ಬಾಲ್ಯದಿಂದಲೂ ಸಿನಿಮಾದ ಬಗ್ಗೆ ಕನಸು ಕಂಡಿದ್ದೆ. ನನ್ನ ಅಪ್ಪ ವೀನಸ್ ನಾಗರಾಜ್ ಸಿನಿಮಾ ಪ್ರೊಡೆಕ್ಷನ್ ಮ್ಯಾನೇಜರ್. ಅವರ ಜೊತೆ ನಾನು ಸಾಕಷ್ಟು ಸಿನಿಮಾ ಸಂಬಂಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದೆ. ನನಗೂ ಸೆಟ್‌ನಲ್ಲಿ ಇರೋದು ಇಷ್ಟ ಆಗ್ತಾ ಇತ್ತು. ಆಗೆಲ್ಲ ನಾನೂ ನಟನಾದರೆ ಹೇಗಿರುತ್ತದೆ ಎಂದು ಕಲ್ಪಿಸಿಕೊಳ್ಳುತ್ತಿದ್ದೆ. ಕಾಲಾನಂತರ ನನ್ನ ಗಮನವೆಲ್ಲಾ ಓದಿನ ಕಡೆ ಕೇಂದ್ರೀಕರಣ ಆಯಿತು. ನಟನೆಯ ಕನಸು ಮಾಸುತ್ತಾ ಹೋಯಿತು. ಬಿಕಾಂ ಮುಗಿಸಿ ಕೆಲಸಕ್ಕೆ ಸೇರಿದೆ. ಮತ್ತೆ ಹಳೆಯ ಕನಸು ಚಿಗುರೊಡೆಯಿತು. ಅದಕ್ಕೆ ನನ್ನ ತಂದೆ ರಂಗಭೂಮಿಯತ್ತ ತೋರಿಸಿದರು. ವಿಜಯನಗರದ ಬಿಂಬದಲ್ಲಿ ರಂಗಭೂಮಿ ಶಿಕ್ಷಣವನ್ನು ಆರಂಭಿಸಿದೆ. ಸ್ವಲ್ಪ ದಿನಗಳ ನಂತರ ನಾಟಕದಲ್ಲಿ ಪಾತ್ರ ಶುರುವಾಯಿತು. ನಂತರ 'ರೂಪಾಂತರ' ತಂಡದಲ್ಲೂ ನಾಟಕಗಳನ್ನು ಮಾಡ್ತಾ ಇದ್ದೆ. ಅಷ್ಟರಲ್ಲಿ ಧಾರಾವಾಹಿಗಳಿಗೆ ಆಡಿಷನ್ ಕೊಡ್ತಾ ಇದ್ದೆ. 'ಕ್ಷಮಾ'ದಲ್ಲಿ ಅವಕಾಶ ಸಿಕ್ಕಿದೆ ಎಂದು ನಿರ್ದೇಶಕ ಭಾರತೀಶ್ ಖಚಿತಪಡಿಸಿದ ನಂತರ. ಕೆಲಸವನ್ನು ಬಿಟ್ಟು ಪೂರ್ಣಾವಧಿ ನಟನಾಗಿದ್ದೇನೆ. ಬಣ್ಣ ಪ್ರೌಢಶಾಲಾ ದಿನಗಳಲ್ಲಿಯೇ ನನ್ನನ್ನು ಆಕರ್ಷಿಸಿದೆ. ಶಾಲಾ ವೇದಿಕೆಗಳಲ್ಲಿ ಡಾನ್ಸ್ ಮಾಡುತ್ತಿದ್ದೆ. ತಮಿಳು– ತೆಲುಗು ಡಾನ್ಸ್ ರಿಯಾಲಿಟಿ ಷೊಗಳಲ್ಲಿ ಭಾಗವಹಿಸುತ್ತಿದ್ದೆ.

**◆ ನಿಮ್ಮ ಮುಂದಿನ ಕನಸಿನ ಬಗ್ಗೆ ಹೇಳುವುದಾದರೆ...**

ಸಮಾಜಮುಖಿ ಸಂದೇಶವನ್ನು ನೀಡುವಂತಹ ಸಿನಿಮಾವನ್ನು ಮಾಡಬೇಕು. ಅದು ಯಾರಿಗಾದರೂ ಅನುಕೂಲ ಆಗಬೇಕು. ಅತ್ಯಾಚಾರ, ಸಾಮಾಜಿಕ ಮೌಢ್ಯ ಕುರಿತು ಸಿನಿಮಾ ಮಾಡಬೇಕು. ದೃಶ್ಯ ಮಾಧ್ಯಮಕ್ಕೆ ದೊಡ್ಡ ಪ್ರಮಾಣದ ವೀಕ್ಷಕ ವರ್ಗವಿದೆ. ಸಾಮಾಜಿಕ ಸಮಸ್ಯೆಗಳನ್ನು ಇಟ್ಟುಕೊಂಡು ಚಿತ್ರಗಳನ್ನು ರೂಪಿಸಬೇಕು. ಅದಕ್ಕಾಗಿ ಒಂದು ತಂಡ ಕಟ್ಟಬೇಕು. ಈಗ ನನಗೆ ಸ್ಕ್ರಿಪ್ಟ್ ಬರಹದ ಬಗ್ಗೆ ಗೊತ್ತಿಲ್ಲ. ಮುಂದೆ ಕಲಿಯಬಹುದು. ಸದ್ಯ ನಾನೊಬ್ಬ ನಟ. ಅದಕ್ಕಾಗಿಯೇ ತಂಡವೊಂದನ್ನು ರಚಿಸುವ ಚಿಂತನೆ ಇದೆ. ಒಂದು ತಂಡವಾಗಿ ಯೂಟ್ಯೂಬ್ ಕಿರುಚಿತ್ರಗಳನ್ನು ಮಾಡುವುದು ಹಣಕಾಸಿನ ಹೊಂದಾಣಿಕೆಯಾದರೆ ಸಿನಿಮಾ ಮಾಡುವ ಗುರಿಯಿದೆ. ಇದರ ಜೊತೆಗೆ ಡಾನ್ಸ್ ಶಾಲೆ ಆರಂಭಿಸಬೇಕು. ಅದರ ಮೂಲಕ ನಟನೆಯನ್ನು ಕಲಿಸಬೇಕು ಎನ್ನುವ ಆಶೆ ಇದೆ.

**◆ ಮಾರುಕಟ್ಟೆ ಕಂಪನಿಯ ಉದ್ಯೋಗಿ ಮಾಡೆಲ್ ಆಗಿದ್ದೀರಿ ಈ ಇಮೇಜ್‌ನಲ್ಲಿ ಭಿನ್ನತೆ ಕಾಣಿಸುತ್ತಾ?**

ಆಗ ನನ್ನ ಸ್ನೇಹ ವಲಯ ತುಂಬ ಚಿಕ್ಕದಾಗಿತ್ತು. ಅದರ ವಿಸ್ತಾರ ಈಗ ಹತ್ತು ಪಟ್ಟು ದೊಡ್ಡದಾಗಿದೆ. ಆಗಿನ ನನ್ನ ಕೆಲಸ ಎಷ್ಟು ಅಗತ್ಯವೋ ಅಷ್ಟಕ್ಕೇ ಮಾತ್ರ ಸೀಮಿತವಾಗಿತ್ತು. ಅದಕ್ಕಿಂತ ಹೆಚ್ಚಿಗೆ ನನಗೂ ಬೇಕಿರಲಿಲ್ಲ ಕಂಪನಿಯೂ ಬಯಸುತ್ತಿರಲಿಲ್ಲ. ಆದರೀಗ ಹಾಗಿಲ್ಲ, ಮಾಡೆಲಿಂಗ್– ಅಭಿನಯವನ್ನು ಜನ ಗುರುತಿಸುತ್ತಿದ್ದಾರೆ. ಅದು ಖುಷಿ ಕೊಡುತ್ತಿದೆ. ಅವರು ಪ್ರೋತ್ಸಾಹಿಸುವ ಮೂಲಕ ನನ್ನ ಬಗ್ಗೆ ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದಾರೆ. ವಿಭಿನ್ನ ಅಭಿರುಚಿಯ ಜನರನ್ನು ಸಂಪರ್ಕ ಮಾಡುತ್ತಿದ್ದೇನೆ. ಆ ಮೂಲಕ ತುಂಬ ಕಲಿಯುತ್ತಿದ್ದೇನೆ. ಅಂದರೆ ಮೊದಲು ನನ್ನ ವೃತ್ತಿ ಜೀವನಕ್ಕೆ ಇದ್ದ ಚೌಕಟ್ಟನ್ನು ಈಗ ಮೀರುತ್ತಿದ್ದೇನೆ.

**◆ ಹೊಸ ತಲೆಮಾರು ನೆಲೆ ಕಾಣುವ ಬಗ್ಗೆ ಹೇಳಿ.**

ನನ್ನ ಸಮಾನ ವಯಸ್ಕರು– ಕಿರಿಯರಿಗೆ ಅವಕಾಶಗಳು ಹೆಚ್ಚಿವೆ. ಹಾಗೆಂದು ಯಾವುದೂ ಸುಲಭಕ್ಕೆ ಇಲ್ಲ. ಇಲ್ಲೂ ಸಿಕ್ಕಾಪಟ್ಟೆ ಸ್ಪರ್ಧೆ ಇದೆ. ಅವಕಾಶಗಳು ಸಾಕಷ್ಟು ಸಿಗುತ್ತಿವೆ. ಪ್ರತಿಭೆಗಳಿಗಂತೂ ನಷ್ಟ ಆಗುತ್ತಿಲ್ಲ. ಅವು ತಮ್ಮನ್ನು ತಾವು ಗುರುತಿಸಿಕೊಳ್ಳಲು ಸಾಧ್ಯವಾಗುತ್ತಿವೆ. ಹೊಸ ತಲೆಮಾರು ಅದನ್ನು ಚೆನ್ನಾಗಿ ಬಳಸುತ್ತಿದೆ ಎಂದೆನಿಸುತ್ತಿದೆ.

■ ರಾಘವೇಂದ್ರ ಕೆ.